doc-391
T·P-2

(1)

R No KRNN 12 ಶ್ರೀ 31-10-1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★
58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee
Celebrated Paper
Satyavadi Daily
Mysore 4
– For Influential Publicity –

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ (3 ಪ್ರ.ಪ

ನಾಳೆಯಿಂದ ಕೋರ್ಟ್ ಭಾಷೆ ಕನ್ನಡ

ರಾಜ್ಯೋತ್ಸವ

ಮೈಸೂರು— ನಗರ ಮುನಿಸಿಪಾಲಿಟಿಯವರು ರಾಜ್ಯೋತ್ಸವವನ್ನು ನವೆಂಬರು 1 ರಂದು ಟೌನ್ ಹಾಲ್ ನಲ್ಲಿ ಆಚರಿಸುವರು; ಸಾಂಸ್ಕೃತಿಕ ಕಾರ್ಯಕ್ರಮಗಳೂ ಇವೆ

●

ಸತ್ತ ಹುಡುಗನ ತಂದೆಗೆ ಧನನೆರವು

ಪಾಟ್ನಾ— ಕಾಂಗ್ರೆಸ್ ಅಧ್ಯಕ್ಷ ಶ್ರೀ ಬೂರಾಲಿರ ಕಾರ್ ಸಂಬಂಧದ ಅಕಸ್ಮಿಕದಲ್ಲಿ ಮೃತಪಟ್ಟ ಹುಡುಗನ ತಂದೆಗೆ ರೂ. 7500 ಕೊಡಲಾಗುವುದೆಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಪ್ರಕಟಿಸಿರುವರು.

★

ಹೆಚ್ಚಿಗೆ ತುಟ್ಟಿಭತ್ಯ

ಬೆಂಗಳೂರು— ಕರ್ನಾಟಕ ಸರಕಾರದ ನೌಕರರಿಗೆ ಅಕ್ಟೋಬರು 1 ರಿಂದ ರೂ 14 ರಿಂದ 54 ರವರೆಗೆ ಹೆಚ್ಚು ತುಟ್ಟಿಭತ್ಯೆ ಕೊಡಲಾಗುವುದೆಂದು ಅರ್ಥ ಮಂತ್ರಿ ಶ್ರೀ ಫೋರ್ಡೆಯವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು

●

ಅಡ್ವೊಕೇಟರಿಗೆ ಉಚಿತ ಇನ್ಷೂರೆನ್ಸ್

ಉತ್ತರ ಪ್ರದೇಶದಲ್ಲಿ ಎಲ್ಲಾ ಅಡ್ವೊಕೇಟರಿಂಗೂ 60 ವರ್ಷದೊಳಗಿನವರಿಗೆ, ಉಚಿತವಾಗಿ ರೂ 5000 ರೂ ಇನ್ಷೂರೆನ್ಸು ಪಾಲಿಸಿ ಪಡೆಯುವ ನವೀನ ಸ್ಕೀಂ ಜಾರಿಗೆ ತರಲಾಗಿದೆ – ವಿನೆ ಕಂತುಗಳನ್ನ ಕಟ್ಟಬೇಕಾಗಿಲ್ಲ ಎನ್ರೋಲ್ ಆಗುವಾಗ ಕೊಡುವ ಸ್ಟ್ಯಾಂಪ್ ಡ್ಯೂಟಿಯನ್ನು ಒಂದು ನಿಧಿಯಾಗಿ ಮಾಡಿ, ಜೀವವಿಮಾ ಸಂಸ್ಥೆಯಿಂದ ಗುಂಪು ಇನ್ಷೂರೆನ್ಸು ಪಾಲಿಸಿ ಪಡೆಯಲಾಗಿದೆ – ಇದಕ್ಕಾಗಿ ಉತ್ತರ ಪ್ರದೇಶದ ಅಡ್ವೊಕೇಟ್ರ ಕಲ್ಯಾಣ ನಿಧಿ ಮುನ್ಸಿವಾಜ್ಞೆ ಹೊರಡಿಸಲಾಗಿದೆ

ಜಯಪ್ರಕಾಶರಿಗೆ ಅದ್ಭುತ ಬೆಂಬಲ

ಲೂಧಿಯಾನಾ– ಪಂಜಾಬಿನ ಕೈಗಾರಿಕಾ ಕೇಂದ್ರ ಲೂಧಿಯಾನಾದಲ್ಲಿ ಜೆ ಪಿ ಅಲೆ ಬಲವಾಗಿ ಬೀಸಿತು – ಜಯಪ್ರಕಾಶರ ಭ್ರಷ್ಟಾಚಾರ ವಿರುದ್ಧ ಚಳವಳಿಗೆ ಬೆಂಬಲವಾಗಿ ನುಂಗಳವಾರ ನಡೆದ ಸಾರ್ವಜನಿಕ ಪ್ರದರ್ಶನದಲ್ಲಿ ಅರ್ಧ ಮಿಲಿಯಕ್ಕೂ ಹೆಚ್ಚು ಮಂದಿ 8 ಕೆಎಂ ಉದ್ದದ ಮೆರವಣಿಗೆಯಲ್ಲಿ ಭಾಗವಹಿಸಿದ್ದರು – ಪಂಜಾಬಿನಲ್ಲಿಯ ಕಮ್ಯೂನಿಸ್ಟೇತರ ವಿರೋಧ ಪಕ್ಷಗಳು ವ್ಯವಸ್ಥೆ ಮಾಡಿದ್ದ ಈ ಮೆರವಣಿಗೆ ಶಾಂತಯುತವಾಗಿ ನೆರವೇರಿತು – ಜೆ ಪಿ ಯವರನ್ನು ಘೋಷಿಸುವ, ಲೌಡ್ ಸ್ಪೀಕರುಗಳದ್ದ 2 ಜೀಪುಗಳು ಮುಂದಿದ್ದವು – ನಂತರ ಜಯಪ್ರಕಾಶರಿದ್ದ, ಜನ ಸಂಘ ಮತ್ತಿತರ ಪಾರ್ಟಿಗಳ ನಾಯಕರುಗಳಿದ್ದ ಮೋಟಾರುಗಳ ಸಾಲು – ನುಂದೆ 5 ಮೋಟಾರು ಸೈಕಲ್ ಸವಾರರು – ಹಿಂದೆ ಚಿತ್ರಿದಾದ ಒಂಟೆಗಳ ಸಾಲು – ಅದರ ಹಿಂದೆ ಪಂಜಾಬು ಅಧಿಕಾರಿಗಳ ವಿರುದ್ಧ, 4 ಮಿಲಿಯ ಪ್ರಜೆಗಳ ಸಹಿ ಇದ್ದ, ಟ್ರಕ್ ತುಂಬ ಮೆಮೊರಾಂಡಂ ಪ್ರತಿಗಳು – ಮೆರವಣಿಗೆ ನಂತರ, ಮೈದಾನದಲ್ಲಿ ಜಯಪ್ರಕಾಶರು ಮಾಡಿದ ಭಾಷಣದಲ್ಲಿ ದೇಶದ ಪರಿಸ್ಥಿತಿ ವ್ಯಾಪಿಸಿ, ಜನರು ತಮ್ಮ ಕಷ್ಟ ನಿವಾರಣೆಗೆ ನೆಮ್ಮಿಯ್ಯನಿಗೆ, ಮೂರ್ಧಾಭಿಷಿಕ್ತನಿಗೆ ಕಾಯಬಾರದೆಂದು ಹೇಳಿದರು – ಮೊದಲಿನ ಕೆಲ ಭಾಷಣಕಾರರು ಇವರನ್ನು ಮೆಸ್ಸಿಯ್ಯನೆಂದು ಸಂಬೋಧಿಸಿದ್ದರು ಆದರೆ ಜಯಪ್ರಕಾಶರು ತಾವು ಮೆಸಯ್ಯನಲ್ಲವೆಂದು ನಮ್ರತೆಯಿಂದ ಹೇಳಿದರು.

★

ಹೆಚ್ಚು ಬೆಲೆಯಲ್ಲಿ ಸಕ್ಕರೆ ಕೊಳ್ಳುವುದು

ಲಂಡನ್— ಬ್ರಿಟನ್ನು ತನ್ನ ಕಾಮನ್ ವೆಲ್ತ್ ಸರಬರಾಜುಗಾರರಿಂದ 548000 ಟನ್ನು ಸಕ್ಕರೆಗೆ ಲಾಂಗ್ ಟನ್ ಒಂದಕ್ಕೆ 140 ಪೌಂಡುಗಳನ್ನು ಕೊಡಲು ಒಪ್ಪಿರುವುದಾಗಿ ಪ್ರಕಟಿಸಲಾಗಿದೆ.

ಚುನಾವಣೆ ಖರ್ಚು

ನವದೆಹಲಿ— ಚುನಾವಣೆಯಲ್ಲಿನ ಖರ್ಚು ವಿಷಯವನ್ನು ಎಲ್ಲಾ ರಾಜಕೀಯ ಪಕ್ಷಗಳಿಗೂ, ಮತ್ತು ಇತರರಿಗೂ ಸಂಬಂಧಿಸಿದ್ದಾದುದರಿಂದ ಎಲ್ಲರೂ ಒಟ್ಟು ಕೂತು ಚರ್ಚಿಸಬೇಕಾದ ವಿಷಯವಿದು ಎಂದು ಪ್ರಧಾನಿ ಇಂದಿರಾಗಾಂಧಿಯವರು ಒಂದು ಇಂಗ್ಲೀಷ್ ಪತ್ರಿಕೆಗಿತ್ತ ಸಂದರ್ಶನದಲ್ಲಿ ತಿಳಿಸಿದರು – ಜಯಪ್ರಕಾಶರ ಕ್ರಾಂತಿಯನ್ನು ಕ್ರಾಂತಿಯಲ್ಲವೆಂದೂ, ಕ್ರಾಂತಿಗೆ ಎದುರೆಂದೂ, ಕ್ರಾಂತಿಗೆ ವಿರುದ್ಧವೆಂದೂ ತಿಳಿಸಿದರು

★

ಮಹಾವೀರರ 2500 ನೇ ನಿರ್ವಾಣೋತ್ಸವ

ಮೈಸೂರು— ಭಗವಾನ್ ಮಹಾವೀರರ 2500 ನೇ ನಿರ್ವಾಣೋತ್ಸವ ಸಮಿತಿಯ ಸಭೆಯು ಮಂಗಳವಾರ ಜಿಲ್ಲಾಧಿಕಾರಿ ಶ್ರೀ ಅರ್ಯಮಿತ್ರರ ಅಧ್ಯಕ್ಷತೆಯಲ್ಲಿ ಸೇರಿತ್ತು; ನುಂಗಿನ ತಿಂಗಳು 13 ನೇ ತಾರೀಖಿನಿಂದ ಒಂದು ವಾರ ಕಾಲ ಆಚರಿಸಲಾಗುವುದು; ಈ ಸಮಾರಂಭಗಳ ಅಂಗವಾಗಿ ರಾಜ್ಯದ ವಿದ್ಯಾ ಇಲಾಖೆಯ ಸಚಿವರಾದ ಶ್ರೀ ನುಲ್ಲಿ ಕಾರ್ಜುನಸ್ವಾಮಿಯವರು 13 ನೇ ನವೆಂಬರ್ 9 ಘಂಟೆಗೆ ಪುರಭವನದ ಮೈದಾನದಲ್ಲಿ ಭಗವಾನ್ ಮಹಾವೀರರ 2500 ನೇ ಮಹೋತ್ಸವದ ಧ್ವಜಾರೋಹಣ ಮಾಡುವರು; ಮೈಸೂರು ನಗರದ ಒಡನಾಡಿಯೊಂದಕ್ಕೆ ಮಹಾವೀರನಗರ ವೆಂದು ಹೆಸರಿಡಲು ಮತ್ತು ಯಾವುದಾದರೂ ವೃತ್ತ (ಸ್ಕ್ವೇರ್) ವೊಂದಕ್ಕೆ ಮಹಾವೀರ ವೃತ್ತ ಎಂದು ನಾಮಕರಣ ಮಾಡಲು ಕ್ರಮ ಕೈಗೊಳ್ಳುವಂತೆ ಸಭೆ ಶಿಫಾರಸು ಮಾಡಿತು; ಮೈಸೂರು ನಗರದಲ್ಲಿ ಮಹಾವೀರ ಭವನವನ್ನು ರಚಿಸಲು ವಿಶೇಷ ಮಾಡಬೇಕೆಂದು ಸಮಿತಿಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.

★ ನವದೆಹಲಿ— 73-74 ರಲ್ಲಿ ದೇಶದಲ್ಲಿ ಆಹಾರಧಾನ್ಯ ಉತ್ಪಾದನೆ 103 61 ಟನ್ ಗಳಷ್ಟಾಗಿತ್ತು.

ಪಾರ್ಲಿಮೆಂಟು ಘೇರಾವೋ

ಲೂಧಿಯಾನ— ಭಾರತ ಸರಕಾರವು ಚುನಾವಣಾ ಸುಧಾರಣೆ ಮಾಡುವುದರಲ್ಲಿ ವಿಫಲಗೊಂಡರೆ, ತಾವು ಪಾರ್ಲಿಮೆಂಟಿನ ಘೇರಾವೋ ವ್ಯವಸ್ಥೆ ಮಾಡುವುದಾಗಿ ಶ್ರೀ ಜಯಪ್ರಕಾಶರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

●

ಕೋರ್ಟುಗಳಲ್ಲಿ ಕನ್ನಡ

ಬೆಂಗಳೂರು—ನವೆಂಬರು 1 ರಾಜ್ಯೋತ್ಸವ ದಿನದಿಂದ ಎಲ್ಲಾ ಜುಡಿಸಿಯಾಲ್ ಮ್ಯಾಜಿಸ್ಟ್ರೇಟು ಕೋರ್ಟುಗಳಲ್ಲಿ ಕನ್ನಡವು ಕೋರ್ಟು ಭಾಷೆಯಾಗಿರುವುದೆಂದು ರಾಜ್ಯ ಸರಕಾರ ಸೂಚಿಸಿದೆ – ಕ್ರಿಮಿನಲ್ ಪ್ರೊ ಕೋಡು ಸೆಕ್ಷನ್ 354 ರ ಕಾರಣಗಳಿಗಾಗಿ ಇಂಗ್ಲೀಷೂ ಈ ಕೋರ್ಟುಗಳ ಭಾಷೆಯಾಗಿರುತ್ತದೆ.

★

ಶೃಂಗೇರಿ ಜಗದ್ಗುರುಗಳ ಉತ್ತರಾಧಿಕಾರಿ

ಶೃಂಗೇರಿ— ಶ್ರೀ ಶೃಂಗೇರಿ ಜಗದ್ಗುರುಗಳು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರು ತಮ್ಮ ಉತ್ತರಾಧಿಕಾರಿಗಳಾಗಿ ಗುಂಟೂರು ಜಿಲ್ಲಾ ಪಾಲನಾಡು ತಾಲ್ಲೂಕಿನ ಶ್ರೀ ಸೀತಾರಾಮಾಂಜನೇಯಲು ರವರನ್ನು ಪ್ರಕಟಿಸಿರುವರು – ಈ ಸಂಬಂಧದ ಸಮಾರಂಭವು ನವೆಂಬರ್ 10 ಮತ್ತು 11 ರಲ್ಲಿ ನಡೆಯುವುದು.

★

ಪ್ರಜಾಪ್ರಭುತ್ವ ರಕ್ಷಿಸಿ

ಪಾಟ್ನಾದಲ್ಲಿ ಜಯಪ್ರಕಾಶ ನಾರಾಯಣರ ಚಳವಳಿಗೆ ವಿರುದ್ಧವಾಗಿ ಪ್ರದೇಶ ಕಾಂಗ್ರೆಸ್ ಸಮಿತಿ ನವೆಂಬರ್ 6 ರಂದು "ಪ್ರಜಾಪ್ರಭುತ್ವ ರಕ್ಷಿಸಿ" ಮೇಳನವನ್ನು ಏರ್ಪಡಿಸುವುದೆಂದು ಹೇಳಲಾಗಿದೆ.

★

ತೆರಪಿನ ಶಿಕ್ಷಣ

ಮೈಸೂರು— ತೆರಪಿನ ಶಿಕ್ಷಣ ವತಿಯಿಂದ ಏರ್ಪಡಿಸಿರುವ " ಭಾರತೀಯ ಆತ್ಮಶಾಸ್ತ್ರ ಮತ್ತು ಪೌಷ್ಟಿಕ ಆಹಾರ ' ಅಲ್ಪಾವಧಿ ಶಿಕ್ಷಣ ಕಾರ್ಯಕ್ರಮವನ್ನು ಕುಲಪತಿ ಪ್ರೊ ॥ ಡಿ. ಜವರೇಗೌಡರು ಆರಂಭಮಾಡಿದರು.

ವಿಚಿತ್ರ ಮನೆ

ಅಮೇರಿಕಾದ ಸಾನ್‌ಜೋಸ್‌ನೀಯಲ್ಲಿನ ಒಂದು ವಿಚಿತ್ರ ಮನೆಯನ್ನು ಅರ್ಧ ಶತಮಾನಗಳಿಂದ ಬಹು ಜನ ನೋಡಿ ವಿಸ್ಮಯಗೊಳ್ಳುತ್ತಿದ್ದಾರೆ. ಆ ಹಳೇ ಮನೆಯಲ್ಲಿ 160 ಕೊಠಡಿಗಳಿವೆ, 10000 ಕಿಟಕಿಗಳಿವೆ, 40 ಮಲಗುವ ಕೋಣೆಗಳಿವೆ, 47 ಅಗ್ನಿಕುಂಡಗಳಿವೆ. 48 ಹಂತಮಾರ್ಗಗಳಿವೆ. 91 ಅಡಿಗೆಮನೆಗಳಿವೆ ; ಹೀಗಿದ್ದರೂ ಅಲ್ಲಿದ್ದವಳು 4 ಅಡಿ 10 ಅಂಗುಲ ಎತ್ತರದ, 95 ಪೌಂಡು ತೂಕದ ಒಬ್ಬಳೇ ಒಬ್ಬಳು ವಿಧವೆ ; ವಿಂಚೆಸ್ಟರ್ ಅವಾರ ಐಶ್ವರ್ಯಕ್ಕೆ ಉತ್ತರಾಧಿಕಾರಿ ಶ್ರೀಮತಿ ಸಾರಾಪಾರ್ಡಿ ವಿಚೆಸ್ಟರ್. ಆಕೆಯು ತನ್ನ 85 ನೇ ವರ್ಷದಲ್ಲಿ 1922 ಕಲ್ಲಿ ನಿಧನಳಾದಳು. ಆಕೆ ತನಗೆ ದೊರೆತ 20 ಮಿಲಿಯ ಡಾಲರು ಆಸ್ತಿಯಲ್ಲಿ ಅರ್ಧವನ್ನು ಕಟ್ಟಡ, ಪೀಠೋಪಕರಣ, ಕಟ್ಟಡ ಶೃಂಗಾರ ಇತ್ಯಾದಿಗಳಿಗೆ 5 ಮಿಲಿಯ ಡಾಲರು ಖರ್ಚು ಮಾಡಿದಳು ; ಆಶ್ಚರ್ಯ ವಿಷಯಗಳಲ್ಲಿ ಒಂದೆಂದರೆ, ಒಂದು ಹಂತದ ಮಾರ್ಗವು 9 ಅಡಿ ಎತ್ತರದಲ್ಲಿ 7 ತಿರುವುಗಳೂ 44 ಹಂತಗಳೂ ಇವೆ ; ಮಾಳಿಗೆಯ ಒಳಭಾಗದಲ್ಲಿ ಮುರದ ಕಲಾಕೃತಿ ಕೆಲಸಗಳಿವೆ ; ಇದಕ್ಕೆ ವಿಶ್ವದಾದ್ಯಂತ ಆರಿಸಿದ ವಿವಿಧ ಮರ ತರಿಸಲಾಗಿತ್ತು.

ವುಡ್‌ಲಾಂಡ್ 1 11 74 ರಂದು

ಕನ್ನಡ ರಾಜ್ಯೋತ್ಸವ ಪ್ರಯುಕ್ತ

4 ಪ್ರದರ್ಶನಗಳು

ರಾಜಕುಮಾರ್ ಅಭಿನಯಿಸಿರುವ ಕನ್ನಡ ಚಿತ್ರ

ಮೇಯರ್ ಮುತ್ತಣ್ಣ

ಅಪೆರಾ 1 11 74 ರಿಂದ

ರಾಜಕುಮಾರ್ ಕಲ್ಯಾಣ ಕುಮಾರ್

ಅಭಿನಯಿಸಿರುವ ಅನೋಘ ಕನ್ನಡ ಚಿತ್ರ

ಭೂ ಕೈಲಾಸ

ಈ ದಿನ 4 ಪ್ರದರ್ಶನಗಳು

Help The Gorakshana

— Humanitarian Propeganda Monthly —

ಪೂರ್ಣ ನಿಶೇಧವಾಗಲಿ
ಭಾರತದಲ್ಲಿ ಗೋವಧೆ



Protect the Cow

Quality Printing Neat Binding

Lakshminarasimha Press

Sivarampet, Mysore 1

SHAKTI
SUDHA

A Superb Tonic

Contribute Liberally
to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore